

ಗುರುದ್ವಾರ, ಬೆಟ್ಟದ ಮೇಲಿನ ಬೌದ್ಧರ ಶಾಂತಿಸ್ತೂಪ ನೋಡಿದೆವು. ಮಾರನೇ ದಿನ ಅಲ್ಲಿನ ನುಬ್ರಾ ಕಣಿವೆಗೆ ಹೊರಟು ನಿಂತೆವು. ನಮ್ಮ ಕಾರಿನ ಚಾಲಕ ಗೇಸ್ಪೋ ಮುಂಜಾನೆ ಏಳು ಗಂಟೆಗೆ ಸಿದ್ಧವಿರಬೇಕೆಂದು ಅಪ್ಪಣೆ ಕೊಟ್ಟಿದ್ದ. ನುಬ್ರಾ ಕಣಿವೆಗೆ ಹೋಗುವ ಹಾದಿಯಲ್ಲಿ 'ಖರದುಂಗ್ಲಾ ಪಾಸ್' ಸ್ಥಳಕ್ಕೆ ಭೇಟಿ ನೀಡಲಿದ್ದೇವೆ ಎಂದೂ ಹೇಳಿದ್ದ. ನಾವಾಗಲೇ ಆ ಊರಿಗೆ ಎರಡು ದಿನಗಳ ಹಳಬರಾಗಿದ್ದೆವು. ಹವಾಮಾನಕ್ಕೆ 'ಒಗ್ಗಿಕೊಳ್ಳುವ' ಪ್ರಕ್ರಿಯೆಯನ್ನು ಸುಲಲಿತವಾಗಿ ನೆರವೇರಿಸಿಕೊಂಡಿದ್ದೇವೆ ಎಂದು ನಿರುಮ್ಮಳವಾಗಿದ್ದೆವು.

ಖರದುಂಗ್ಲಾ ಪಾಸ್ ಲೇಹ್‌ನಿಂದ 39 ಕಿ.ಮೀ.ನಷ್ಟು ದೂರ. ವಾಹನ ಚಾಲಕ ಪ್ರಯಾಣದುದ್ದಕ್ಕೂ ಸ್ಥಳದ ವಿಶಿಷ್ಟತೆ, ಎತ್ತರ ವಿವರಿಸುತ್ತಿದ್ದ. ಎಲ್ಲೆಲ್ಲೂ ಹಿಮತುಂಬಿದ ಶಿಖರಗಳು. ಬರಿಗಣ್ಣಲ್ಲಿ ಹಿಮವನ್ನು ನೋಡಲಾಗದು. ಹಿಮದ ಮೇಲೆ ಬೀಳುವ ಸೂರ್ಯನ ರೇಖೆಗಳು ಎಷ್ಟು ಮೊನಚಾಗಿರುತ್ತವೆಂದರೆ, ನಮ್ಮ ದೃಷ್ಟಿಯನ್ನೇ ಇಂಗಿಸಬಲ್ಲಷ್ಟು. ಇದನ್ನೇ **Snow Blindness** ಎನ್ನುತ್ತಾರೆ. ಬೆಟ್ಟದ ಕಿರಿದಾದ ರಸ್ತೆಗಳು, ತಿರುವುಗಳು ನಮ್ಮನ್ನು ವಿಚಲಿತಗೊಳಿಸಿದವು. ಆದರೆ ವಾಹನ ಚಾಲಕ ಆತ್ಮವಿಶ್ವಾಸವುಳ್ಳವನು. ಎಂಥ ಕಿಷ್ಕಿಂಧೆಯಂಥ ತಿರುವುಗಳೂ ಅವನನ್ನು ಹೆದರಿಸಲು ಸಾಧ್ಯವಾಗಲಿಲ್ಲ. ಕಾರು ಎತ್ತರಕ್ಕೆ ಚಲಿಸುತ್ತಿದ್ದಂತೆ, ನನ್ನನ್ನೆಂದೂ ಕಾಡಿರದಿದ್ದ ತಲೆನೋವು ಕಾಣಿಸಿಕೊಂಡಿತ್ತು. ಕಿಟಕಿ ಇಳಿಸಿದರೆ, ಹೊರಗಿನ ತಂಪುಗಾಳಿ ಸಹಿಸಲಸಾಧ್ಯ.

ಖರದುಂಗ್ಲಾ ಪಾಸ್‌ನ ವಾತಾವರಣಕ್ಕೆ ಹೊಂದಿಕೊಳ್ಳಲು ಹೆಚ್ಚೇ ಕಸರತ್ತು ಬೇಕಾಗುತ್ತದೆ. ಮೆದುಳು, ದೇಹ ಎಂದಿಗಿಂತಲೂ ಮೀರಿದ ಚುರುಕುತನ ಪ್ರದರ್ಶಿಸಬೇಕಾಗುತ್ತದೆ. ಪ್ರಸಿದ್ಧ ಮನೋವಿಜ್ಞಾನಿ ಕಾರ್ಲ್ ಯುಂಗ್ ಇಂತಹ ವಿಸ್ಮಯಗಳಿಂದ ಪಾರಾಗುವುದನ್ನು 'ಎರಡನೇ ಜನ್ಮ'ದ ಅನುಭವವೆಂದು ಕರೆದಿದ್ದಾನೆ. ಇದು ನಮ್ಮ ಅನುಭವಕ್ಕೂ ಬಂದಿತ್ತು.

ಖರದುಂಗ್ಲಾ ಪಾಸ್ ತಲುಪಿದೆವು. ಕಾರಿನಿಂದ ಇಳಿಯುತ್ತಿದ್ದಂತೆ ಕಾಲುಗಳು ತಟಸ್ಥಗೊಂಡವು. ನಿಧಾನವಾಗಿ ಹೆಜ್ಜೆ ಇಡಲಾರಂಭಿಸಿದೆ. ತಲೆಸಿಡಿತ ಉಲ್ಬಣವಾಗುತ್ತಿತ್ತು. ಅಲ್ಲಿಂದ ಬೇಗ ಹೊರಡುವುದು ಮುಖ್ಯವಾಗಿತ್ತು. ಸಮಯ ಪೋಲು ಮಾಡದೆ ಹೊರಟುಬಿಟ್ಟೆವು. ಕಾರು ಕೊಂಚ ಕೆಳಗಿಳಿದ ಕೂಡಲೇ ನನ್ನಿಡೀ ದೇಹ ತುಸುವೇ ಹಗುರವಾದಂತನ್ನಿಸಿತ್ತು. ಅರ್ಧ ಕಿ.ಮೀ. ಕೆಳಗಿಳಿದು ಚಹಾಗೆಂದು ಪುಟ್ಟ ಅಂಗಡಿಯ ಬೆಂಚಿನ ಮೇಲೆ ಕೂತೆ. ನನ್ನಲ್ಲಾಗ ವಿಚಿತ್ರ ರೀತಿಯ ಬೆನ್ನುನೋವು ಉಂಟಾಯ್ತು. ಇವೆಲ್ಲ **'Altitude Sickness'** ಎಂದ ಚಾಲಕ. ಲಡಾಖ್ ಪರ್ವತ ಶ್ರೇಣಿಗಳು ತನ್ನ ರೌದ್ರ ಸೌಂದರ್ಯದ ದರ್ಶನವನ್ನು ನಮಗೆ ದಯಪಾಲಿಸಿತ್ತು! 'ಬದುಕಿದೆಯಾ ಬಡಜೀವವೇ' ಅಂದುಕೊಂಡು ಮಧ್ಯಾಹ್ನ ನುಬ್ರಾ ಕಣಿವೆ ತಲುಪಿದೆವು.

ಕೊನೆ ದಿನ, ಪಾಂಗೋಂಗ್ ಸರೋವರಕ್ಕೆ ಪ್ರಯಾಣ ಬೆಳೆಸಿದೆವು. ನೀಲಿ, ಹಸಿರು ಬಣ್ಣಗಳ ಸಮ್ಮಿಶ್ರಣದ ಅತ್ಯಂತ ಮನೋಹರ ಸರೋವರವದು. ಹಾಗೇ ಸುಮ್ಮನೆ ದಡದಲ್ಲಿ ಕುಳಿತಾಗ, ಯೋಗನಿದ್ರೆಯಲ್ಲಿದ್ದಂತೆ ಕಾಣುತ್ತಿದ್ದ ಪಾಂಗೋಂಗ್ ಸರೋವರ ಹಾಗೂ ಹಿಮಾವೃತ ಶಿಖರಗಳು, 'ನನ್ನ ಚಮತ್ಕಾರಗಳಿಗೆ ಹೆದರಿಬಿಟ್ಟಿರಾ' ಎಂದು ನಕ್ಕಂತೆ ಭಾಸವಾಯಿತು.

**ಪ್ರತಿಕ್ರಿಯಿಸಿ: feedback@sudha.co.in**



ಪಾಂಗೋಂಗ್ ಸರೋವರದ ತಟದಲ್ಲಿ...


